ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಫೈನ್ಆರ್ಟಿಯರ್ ಸಾಲು ಮುಗಿಯಲು ನಾಲ್ಕೈದು ತಿಂಗಳು ಮಾತ್ರ ಉಳಿದಿವೆ. ಅದರೊಳಗಾಗಿ ಈ ಕೆಲಸಗಳು ಮುಗಿಯುತ್ತವೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಆದಷ್ಟು ಬೇಗ ತರಿಸಿದು ಮಾಡಿ ಕೆಲಸಮಾಡಬೇಕೆಂದು ಹೇಳಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆ ರೀತಿ ಮಾಡುವಂತೆ ಒತ್ತಾಯ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ತೀವ್ರಗತಿಯಿಂದ ಕೆಲಸಮಾಡಬೇಕೆಂದು ಹೇಳಿದೆ.

ಶ್ರೀ ಎಸ್. ಸಿದ್ದಪ್ಪ.—ಕೆಲಸ ನಡೆದು ಬಹಳ ದಿವಸಗಳಾದರೂ ಕಂಟ್ರಾಕ್ಟರುಗಳಿಗೆ ಜಾಗ್ರತೆ ಬಿಲ್ ಪಾಸ್ ಮಾಡಿ ಹಣ ಪಾವತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

Building of Taluk Office, Kunigal.

Q.—498. Sri T. N. MUDALAGIRI GOWDA (Kunigal).—

Will the Government be pleased to state :—

(*a*) when the work relating to the building of the Taluk Office, Kunigal, had been given on tender basis ;

(*b*) the amount for which the tender had been accepted;

(*c*) the number of times this estimate was revised ; the years in which it was revised and the reasons therefor ;

(*d*) the extent on this account to which the tender amount has exceeded ?

A.—Sri Kadidal MANJAPPA (Minister for Revenue and Public Works).—

(*a*) In 1947.

(*b*) Rs. 56,193 for the work portion.

(*c*) The revised estimate is come for the first time and is under consideration though enhanced rates were sanctioned in respect of some items earlier.

(*d*) Rs. 8,631 on account of paying enhanced rates.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಇದರ ಅಂದಾಜಿನ ಮೊಬಲಗೆಷ್ಟು ?

*ಶ್ರೀ ಕಡಿದಾಳ್ ಮಂಜಪ್ಪ.—85 ಸಾವಿರ ರೂಪಾಯಿಗಳು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಯಾವ ಯಾವ ಬಾಬುಗಳಿಗಾಗಿ ಈ ಅಂದಾಜಿನಲ್ಲಿ ಹೆಚ್ಚು ಹಣ ಒದಗಿಸಲಾಗಿದೆ ?

Sri Kadidal MANJAPPA.—Teak Wood, R.C.C. Jajja, R.C.C. Beams, roofing, white-washing, green painting, flooring.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಟೆಂಡರಿನಲ್ಲಿ ಇದನ್ನೆಲ್ಲಾ ಸೇರಿಸಿತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ಸೇರಿಸಿತ್ತು. ಆದರೆ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲ, ದರ ಗಿಟ್ಟುವುದಿಲ್ಲ ಎಂದು ಹೇಳಿದ್ದರಿಂದ 1951ರಲ್ಲಿ ದರ ಜಾಸ್ತಿಮಾಡಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಗಿಟ್ಟುವುದಿಲ್ಲ ವೆಂದು ಹೇಳಿದ್ದನ್ನು ಯಾವ ಆಧಾರದಮೇಲೆ ಒಪ್ಪಿದಿರಿ?

ಶ್ರೀ ಕಡಿದಾಳ್ ಮಂಜಪ್ಪ.—ದರ ಗಿಟ್ಟುವುದಿಲ್ಲ ವೆಂದು ಹೇಳಿದಮೇಲೆ ಕೆಲಸ ನಿಲ್ಲಿಸಿದ್ದರಿಂದ ದರ ಹೆಚ್ಚಿಸಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ದರ ಹೆಚ್ಚಾಗಿ ಪಡೆಯುವುದಕ್ಕೆ ತಾನೆ ಕೆಲಸ ನಿಲ್ಲಿಸುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹೇಳುವುದಕ್ಕಾಗುವುದಿಲ್ಲ. ಆಗ ಭಾಕಿಕಡೆಗಳಲ್ಲಿ ಅದೇ ವಿಧವಾದ ಕೆಲಸಕ್ಕೆ ಯಾವ ದರವಿದೆ ಮತ್ತು ಆ ದರ ಲಾಭದಾಯಕವಾಗಿದೆಯೆ ಎಂಬುದನ್ನು ವಿಚಾರಮಾಡಿ ಸರ್ಕಾರದವರು ಜಾಸ್ತಿಮಾಡಿದ್ದಾರೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಟೆಂಡರನ್ನು ಒಪ್ಪುವಾಗ ಇದನ್ನೆಲ್ಲಾ ಪರಿಶೀಲಿಸಿ ತಾನೆ ಒಪ್ಪಿಕೊಳ್ಳುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನಿರುವುದು ಸಾಮಾನ್ಯವಾಗಿ ಟೆಂಡರನ್ನು ಒಪ್ಪಿದಮೇಲೆ ದರ ಜಾಸ್ತಿಮಾಡಬಾರದು ಎಂದು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಈಗ ಒಟ್ಟು ಎಷ್ಟು ಹಣ ಖರ್ಚಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಚೀಫ್ ಇಂಜನಿಯರಿಂದ 1,11,786 ರೂಪಾಯಿಗಳಿಗೆ ತಿದ್ದುಪಾಟಾದ ಅಂದಾಜು ಬಂದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಈ ತರಹ ತಿದ್ದುಪಾಟು ಮಾಡುವ ಒಂದು ನೀತಿಯಿಂದ ಹೆಚ್ಚು ಹೊಬಲಗು ಖರ್ಚಾಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇತ್ತೀಚೆಗೆ ನುಮಾರು ಒಂದು ವರ್ಷದ ಹಿಂದೆ ಕೆಲಸಗಳನ್ನು ಟೆಂಡರು ಮೂಲಕ ಕೊಟ್ಟಿದ್ದರೆ ದರ ಜಾಸ್ತಿ ಮಾಡಬಾರದೆಂದು ಒಂದು ಸರ್ಕ್ಯುಲರ್ ಕಳುಹಿಸಿದೆ.

ಶ್ರೀ ಎಸ್. ಸಿದ್ದಪ್ಪ.—ಕಂಟ್ರಾಕ್ಟರುಗಳಿಗೆ ಸರ್ಕಾರ ಗೊತ್ತುಮಾಡಿರುವ ದರಕ್ಕಿಂತ ಯಾವ ಕಾರಣದಿಂದಲೂ ಹೆಚ್ಚಾಗಿ ಕೊಡಬಾರದೆಂದು ಬಹಳ ಕಾಲದಿಂದ ವಿಧಾಯಕವಾಗಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೊಡಬಾರದೆಂದು ಸಾಮಾನ್ಯವಾಗಿ ಹೇಳಿದೆ. ಆದರೆ ಕೆಲವು ಸಂದರ್ಭಗಳಲ್ಲಿ ನ್ಯಾಯವಾದ ಕಾರಣಗಳಿಗಾಗಿ ದರವನ್ನು ತಿದ್ದುಪಾಟುಮಾಡುತ್ತಿದ್ದೇವೆ.

Mavathur Tank in Koratagere Taluk.

Q.—518. Sri MUDDURAMIAH (Koratagere-Madhugiri).—

Will the Government be pleased to state :—